ಒ ಎಸ್ 185-2015

ಪಿಡಬ್ಲ್ಯೂ- 1

(ದಿನಾಂಕ 16-08-2018 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.)

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಎಸ್.ಬಿ.ವಿ. ವಕೀಲರಿಂದಃ-**

ಈ ದಾವೆಗೂ ಮುಂಚೆ ಮೊದಲು ಒಂದು ದಾವೆ ಹಾಕಿದ್ದೆ ಎಂದರೆ ಸರಿ. ಆ ದಾವೆ ಯ ನಂಬರ್ 245/2014 ಎಂದರೆ ಸರಿ. ಹಳೆಯ ದಾವೆಯಲ್ಲಿ ನನ್ನ ತಂದೆಯ ವರ ಹೆಸರಿನಲ್ಲಿ ಇದ್ದಂತಹ ಆಸ್ತಿಯ ಮೇಲೆ ಹಾಕಿದ್ದೇವೆ. ಈಗಲೂ ಸದರಿ ಆಸ್ತಿಗಳ ಪಹಣಿ ಪತ್ರಗಳು ನನ್ನ ಅಜ್ಜನ ಹೆಸರಿನಲ್ಲಿ ಇದ್ದಿರುತ್ತವೆ. ಸದರಿ ಆಸ್ತಿಗಳ ಸರ್ವೆ ನಂಬರ್ ಗೊತ್ತಿಲ್ಲದೇ ಇರುವುದರಿಂದ ಹೇಳಲು ಆಗುವುದಿಲ್ಲ, ಸದರಿ ಆಸ್ತಿಗಳು ಮೂಲತಃ ಮರಿಯಪ್ಪ ಮತ್ತು ದುರುಗಮ್ಮ ಗಂಡ ಹೆಂಡತಿಯರಿಗೆ ಸೇರಿದ್ದು ಎಂದರೆ ಸರಿ. ಅವರು ಹೀಗ ಗತಿಸಿದ್ದಾರೆ ಎಂದರೆ ಸರಿ. ಅವರಿಗೆ ಸರ್ವೆ ನಂಬರ್ 81/ಬಿ 1 ಎ ರಲ್ಲಿ 1 ಎಕರೆ 70 ಸೆಂಟ್ಸ್ ಹಂಪಸಾಗರದಲ್ಲಿ ಹಾಗೂ ಡೋರ್ ನಂಬರ್ 2/2015, 30X60 ಅಡಿಗಳ ಸ್ವತ್ತು ಇತ್ತು ಎಂದರೆ ಸರಿ. ಸದರಿ ಆಸ್ತಿಗೆ ಸರ್ಕಾರ ಮರಿಯಪ್ಪನಿಗೆ ಪಟ್ಟಾ ಕೊಟ್ಟಿದೆ ಎಂದರೆ ಸರಿ. ನಾನು ಮೊದಲು ಸೂರ್ಯನಾರಾಯಣ ರಾಜು ಎಂಬುವವರ ಮೇಲೆ ದಾವೆ ಹಾಕಿದ್ದೆನೆಂದರೆ ಸರಿ. ಸರ್ವೆ ನಂಬರ್ 103/ಎ/2 ಸಿ ವಿಸ್ತೀರ್ಣ 3 ಎಕರೆ 45 ಸೆಂಟ್ಸ್ ಮರಿಯಪ್ಪನಿಗೆ ಸಂಬಂದಪಟ್ಟದ್ದು ಎಂದರೆ ಸರಿ. ಅದರಲ್ಲಿ ನನಗೆ ಭಾಗ ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಈ ದಾವೆಯಲ್ಲಿ ಸೂರ್ಯನಾರಾಯಣ ರಾಜುವನ್ನು ಮತ್ತು ಸರ್ವೆ ನಂಬರ್ 103/ಎ/2ಸಿ ವಿಸ್ತೀರ್ಣ 3 ಎಕರೆ 45 ಸೆಂಟ್ಸ್‌ನ್ನು ಉದ್ದೇಶಪೂರಕವಾಗಿ ಸೇರಿಸಿಲ್ಲ ಎಂದರೆ ಸರಿ. ಈ ದಾವೆಯನ್ನು ನನ್ನ ತಂದೆ ಮತ್ತು ಅವರ ಸಹೋದರಿಯರ ಮೇಲೆ ಹಾಕಿರುತ್ತೇನೆ. ಹಳೆಯ ದಾವೆಯನ್ನು ನಾನು ನನ್ನ ತಂದೆಯವರ ಮೇಲೆ ಹಾಕಿರುತ್ತೇನೆ. ನನ್ನ ತಾಯಿ ಹಡಗಲಿ ನ್ಯಾಯಾಲಯದಲ್ಲಿ ನನ್ನ ತಂದೆಯ ವಿರುದ್ದ ಜೀವನಾಂಶಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿ ವಜಾ ಆಗಿತ್ತು ಎಂದರೆ ಸರಿ.

ಮುಂದುವರೆದ ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕೀಲರು ಸಮಯವಕಾಶ ಕೋರಿರುವರು ಅನುಮತಿಸಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ.